

ಬ್ರಹ್ಮಪುತ್ರ ನದಿಕನ್ನಡಿಯಲ್ಲಿ ಕಾಮಾಖ್ಯ ಮಾತೆಯ ಮಂದಿರ

## ಉಮಾನಂದ ಭೈರವ

ಕಾಮಾಖ್ಯ ದೇವಾಲಯದಿಂದ ಸ್ವಲ್ಪ ದೂರದಲ್ಲಿ ಬ್ರಹ್ಮಪುತ್ರ ನದಿಯ ಮಧ್ಯದಲ್ಲಿರುವ ದ್ವೀಪದಲ್ಲಿ ಉಮಾನಂದ ಭೈರವನ ದೇವಸ್ಥಾನವಿದೆ. ಈ ಉಮಾನಂದ ಭೈರವ ಶಕ್ತಿಪೀಠದ ಭೈರವನಾಗಿದ್ದಾನೆ. ಆತನ ದರ್ಶನವಿಲ್ಲದೆ, ಕಾಮಾಖ್ಯ ದೇವಿಯ ದರ್ಶನವು ಅಪೂರ್ಣವೆಂದು ಪರಿಗಣಿಸಲಾಗಿದೆ. ಭೈರವ ಮಂದಿರದ ದ್ವೀಪಕ್ಕೆ ಮಧ್ಯಾಂಚಲ ಪರ್ವತ ಎಂದೂ ಕರೆಯುತ್ತಾರೆ. ಅಲ್ಲಿ ಸಮಾಧಿಯಲ್ಲಿದ್ದ ಶಿವನನ್ನು ಕಾಮದೇವನು ಕಾಮಬಾಣದಿಂದ ಹೊಡೆದು ಎಚ್ಚರಿಸಿದನು ಮತ್ತು ಎಚ್ಚರಗೊಂಡ ನಂತರ ಶಿವನು ತನ್ನ ಮೂರನೇ ಕಣ್ಣಿನಿಂದ ಅವನನ್ನು ಭಸ್ಮ ಮಾಡಿದನು ಎಂದು ಹೇಳಲಾಗುತ್ತದೆ.



ಅಂಬೂಬಾಚಿ ಮೇಳದ ಸಂದರ್ಭದಲ್ಲಿ ದೇವಿ ಮಂದಿರದ ಆವರಣದಲ್ಲಿ ಭಕ್ತರ ಭಜನೆ

### ಏನಿದು ಶಕ್ತಿಪೀಠ?

ಭಗವಾನ್ ವಿಷ್ಣುವಿನ ಸುದರ್ಶನ ಚಕ್ರದಿಂದ ಸತಿದೇವಿಯ ವಿವಿಧ ಭಾಗಗಳು ಬಿದ್ದಲ್ಲೆಲ್ಲ (51 ಕಡೆ) ಒಬ್ಬಳು ಶಕ್ತಿದೇವಿ ಮತ್ತು ಒಬ್ಬ ಭೈರವನು ಆಸೀನರಾದರು ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಭಾರತದ ಪುಣ್ಯಭೂಮಿಯಲ್ಲಿ, ಈ ಶಕ್ತಿಪೀಠಗಳು ವಿವಿಧ ಭಾಗಗಳಲ್ಲಿ ನೆಲೆಗೊಂಡಿವೆ. ಅವುಗಳ ದರ್ಶನ ಮತ್ತು ಪೂಜೆಯು ಇಷ್ಟಾರ್ಥಗಳನ್ನು ಪೂರೈಸುತ್ತದೆ ಎನ್ನುವುದು ಭಕ್ತರ ನಂಬಿಕೆ.

ದೇಶದಲ್ಲಿರುವ 51 ಶಕ್ತಿಪೀಠಗಳಲ್ಲಿ ಅತ್ಯಧಿಕ ಮಹತ್ವ ಕಾಮಾಖ್ಯ ಧಾಮ್‌ಗಿದೆ. ಸತಿದೇವಿಯ ಯೋನಿಪೀಠ ಇರುವುದೇ ಇದಕ್ಕೆ ಕಾರಣ.

ಸೌರ ಆಷಾಢ ತಿಂಗಳಲ್ಲಿ ಪೃಥ್ವಿ ಋತುಮತಿಯಾಗುತ್ತಾಳೆ ಎಂದು ಭಕ್ತರ ನಂಬಿಕೆ. ಈ ಸಂದರ್ಭದಲ್ಲಿ ದೇವಳದ ಅರ್ಚಕರು ಪೀಠದಮೇಲೆ ಬಿಳಿ ವಸ್ತ್ರ ಹಾಕುತ್ತಾರೆ. ನಾಲ್ಕನೆಯ ದಿನ ಬೆಳಿಗ್ಗೆ ಬಾಗಿಲು ತೆರೆದು ಅಭಿಷೇಕ ಪೂಜೆಯ ನಂತರ ಭಕ್ತರಿಗೆ ಪ್ರವೇಶ ಸಿಗುವುದು. ಯೋನಿಪೀಠಕ್ಕೆ ಹಾಕಿದ ಬಟ್ಟೆ ಕೆಂಪು ನೀರನ್ನು ಹೊಂದಿದ್ದು, ಆ ಬಟ್ಟೆಯ ತುಂಡು ಮಹಾಪ್ರಸಾದದ ರೂಪದಲ್ಲಿ ಭಕ್ತರಿಗೆ ದೊರೆಯುವುದು. ಅದನ್ನು ಪಡೆಯುವುದು ಸಾಧಕರಿಗೆ ಅತ್ಯಂತ ಮಹತ್ವದ್ದಾಗಿರುತ್ತದೆ. ಆ ದಿನಗಳಲ್ಲಿ ಬ್ರಹ್ಮಪುತ್ರ ನದಿಯ ನೀರು ಕೂಡ ಕೆಂಪು ಬಣ್ಣಕ್ಕೆ ತಿರುಗುತ್ತದೆ ಎಂಬ ನಂಬಿಕೆಯೂ ಇದೆ.

ಕಾಮಾಖ್ಯಕ್ಕೆ ಬರುವ ಪ್ರವಾಸಿಗರು ಕಾಮೇಶ್ವರಿ ದೇವಿ ಮತ್ತು ಕಾಮೇಶ್ವರ ಶಿವನನ್ನು ಭೇಟಿ ಮಾಡುತ್ತಾರೆ. ನಂತರ ಯೋನಿ ಮಹಾಮುದ್ರೆಗೆ ಭೇಟಿ ನೀಡುತ್ತಾರೆ. ದೇವಿಯ ಯೋನಿಮುದ್ರಾಪೀಠವು ಹತ್ತು ಮೆಟ್ಟಿಲುಗಳ ಕೆಳಗಿದ್ದು, ಶಾಶ್ವತ ದೀಪವು ಉರಿಯುತ್ತಿರುವ ಗುಹೆಯಲ್ಲಿದೆ. ಅಲ್ಲಿಯ ಮಾರ್ಗವನ್ನು ವಿಭಿನ್ನವಾಗಿ ಮಾಡಲಾಗಿದೆ. ದೇವಸ್ಥಾನದ ಪರಿಸರದಲ್ಲಿ ಪ್ರಾಣಿಬಲಿಯ ದೃಶ್ಯಗಳೂ ಇವೆ.

ಈ ದೇವಾಲಯದಲ್ಲಿ ದೇವಿಯ ವಿಗ್ರಹವಿಲ್ಲ. ದೇವಿಯ ಯೋನಿ ಭಾಗವನ್ನು ಮಾತ್ರ ಪೂಜಿಸಲಾಗುತ್ತದೆ, ಅದು ಬಂಡೆಯ ರೂಪದಲ್ಲಿದೆ. ಅದನ್ನು ಪೂಜಿಸಿ, ದರ್ಶನ ಮಾಡಿ, ಮುಟ್ಟುತ್ತಾರೋ ಅವರಿಗೆ ದೇವರ ಅನುಗ್ರಹ, ಮೋಕ್ಷದೊಂದಿಗೆ ತಾಯಿಯ ಆಶೀರ್ವಾದವೂ ದೊರೆಯುತ್ತದೆ ಎನ್ನುವುದು ನಂಬಿಕೆ.

ಅಂಬುಬಾಚಿ ಉತ್ಸವವನ್ನು ಹೊರತುಪಡಿಸಿ, ಕಾಮಾಖ್ಯದಲ್ಲಿ ಇನ್ನೂ ಎರಡು ಉತ್ಸವಗಳನ್ನು ಆಚರಿಸಲಾಗುತ್ತದೆ. ಅವುಗಳಲ್ಲಿ ಒಂದು 'ದೇವಧ್ವನಿ'. ಆ ಉತ್ಸವದಲ್ಲಿ ಭಕ್ತರು ವಾದ್ಯಗಳೊಂದಿಗೆ ನೃತ್ಯವನ್ನು ಮಾಡುತ್ತಾರೆ. ಪೌಷ ಮಾಸದ ಕೃಷ್ಣಪಕ್ಷದಲ್ಲಿ 'ಪುಷ್ಯಾಭಿಷೇಕ' ಉತ್ಸವವನ್ನು ಪುಷ್ಯ ನಕ್ಷತ್ರದಲ್ಲಿ ಆಚರಿಸಲಾಗುತ್ತದೆ. ಆಗ ಕಾಮೇಶ್ವರನ ಚರಮೂರ್ತಿಯನ್ನು ಕಾಮೇಶ್ವರ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗುತ್ತದೆ. ಎರಡನೆಯ ದಿನ, 'ಹರ–ಗೌರಿ ವಿವಾಹ ಮಹೋತ್ಸವ'ವನ್ನು ಭಗವತಿಯ ಪಂಚರತ್ನ ದೇವಾಲಯದಲ್ಲಿ ಆಚರಿಸಲಾಗುತ್ತದೆ.

ಹೆಣ್ಣುಮಕ್ಕಳ ಮುಟ್ಟಿನ ಪ್ರಕ್ರಿಯೆಯನ್ನು ಸಮಾಜ ಸಹಜವಾಗಿ ಕಾಣುವ ನಿಟ್ಟಿನಲ್ಲಿ ಕಾಮಾಖ್ಯದ 'ಅಂಬುಬಾಚೀ ಮೇಳ' ಪ್ರೇರಣೆ ನೀಡುವಂತಿದೆ.

ಪ್ರತಿಕ್ರಿಯಿಸಿ: feedback@sudha.co.in

ಅಂಬೂಬಾಚಿ ಮೇಳದ ಸಂದರ್ಭದಲ್ಲಿ ಸಾಧುಸಂತರ ಯೋಗ ಪ್ರದರ್ಶನ

